**<u>ಸಾಕ್ಷಿಯನ್ನು ದಿನಾಂಕಃ 05.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ.ಎಲ್.ಟಿ. ವಕೀಲರಿಂದಃ</u>**

1 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಹೆಂಡತಿಯಾಗಿದ್ದು, 2 ಮತ್ತು 3 ನೇ ಪ್ರತಿವಾದಿಗಳು ಅವರ ಮಕ್ಕಳಾಗಿರುತ್ತಾರೆ. 5 ನೇ ಪ್ರತಿವಾದಿ ನನ್ನ ಹೆಂಡತಿ. ವಾದಿಯು ಯಾವ ಆಸ್ತಿ ಸಂಖ್ಯೆಯ ಮೇಲೆ ಈ ದಾವೆ ಹೂಡಿರುತ್ತಾರೆಂದು ನನಗೆ ಅದರ ಆಸ್ತಿ ನಂಬರ್ ಗೊತ್ತಿರುವುದಿಲ್ಲ. ವಾದಿಯು ಈ ದಾವೆಯನ್ನು ಹೂಡಿದ ನಂತರ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಂಬಂಧಿಸಿದ ಪಂಚಾಯಿತಿಯಲ್ಲಿ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ಅದೇ ರೀತಿ ದಾವಾ ಆಸ್ತಿಯ ಚೆಕ್ಕುಬಂದಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ನನ್ನ ಹಾಗು ಉಳಿದ ಎಲಾಲ ಪ್ರತಿವಾದಿಗಳ ಪರವಾಗಿಯೂ ಸಲ್ಲಿಸಿರುತ್ತೇನೆ. ವಾದಿಯು ಈ ದಾವೆಯಲ್ಲಿ ಹಾಜರುಪಡಿಸಿದ ದಿನಾಂಕಃ 07.12.2009 ರ ಧಾನ ಪತ್ರವನ್ನು ನೋಡಿರುವುದಿಲ್ಲ. ನಾನು ಈ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಸದರಿ ಧಾನ ಪತ್ರದ ಬಗ್ಗೆ ತಿಳಿಸಿರುವುದಿಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಹೆಚ್.ಎಸ್. ಶಿವಣ್ಣ ಅಂದರೆ 1 ನೇ ಪ್ರತಿವಾದಿಯ ಗಂಡ ಹಾಗು 2 ಮತ್ತು 3 ನೇ ಪ್ರತಿವಾದಿಗಳ ತಂದೆಯ ಆಸ್ತಿ ಬರುತ್ತದೆಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ತಮ್ಮ ಜಾಗವನ್ನು ಅಳತೆ ಮಾಡಲು ಬಂದಾಗ ವಾದಿಯು ಆ ಬಗ್ಗೆ ತಕರಾರು ಮಾಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಂತರ ಅಳತೆಗೆ ಬಂದ ಪಂಚಾಯಿತಿ ಅಧಿಕಾರಿಗಳು ಹಿಂದಕ್ಕೆ ಹೋಗಿದ್ದು ನಂತರ ನಾನು ಹಾಗು ಉಳಿದ ಪ್ರತಿವಾದಿಗಳು ವಾದಿಯ ದಾವಾ ಆಸ್ತಿಯ ಬಳಿ ಹೋಗಿ ಅವರ ಸ್ವಾಧೀನಕ್ಕೆ ತೊಂದರೆ ನೀಡಿರುತ್ತೇವೆಂದರೆ ಸರಿಯಲ್ಲ. ಈ ಬಗ್ಗೆ ವಾದಿಯು ದಿನಾಂಕಃ 25.07.2018 ರಂದು ಪೋಲೀಸರಿಗೆ ದೂರನ್ನು ನೀಡಿರುತ್ತಾರೆಂದರೆ ಸರಿ. ಅದೇ ರೀತಿ ಹಿಂದೆಯೂ ಸಹ ನಾವು ವಾದಿಗೆ ತೊಂದರೆ ಕೊಟ್ಟಾಗ ದಿನಾಂಕಃ 23.02.2018 ರಂದು ವಾದಿಯು

ಪೋಲೀಸರಿಗೆ ದೂರನ್ನು ನೀಡಿರುತ್ತಾರೆಂದರೆ ಸಾಕ್ಷಿಯು ದೂರನ್ನು ನೀಡಿರುವುದು ನಿಜ ಆದರೆ ನಾವು ಯಾವುದೇ ತೊಂದರೆ ಕೊಟ್ಟಿರುವುದಿಲ್ಲವೆಂದು ನುಡಿಯುತ್ತಾರೆ. ನಾನು ಹಾಗು ಉಳಿದ ಪ್ರತಿವಾದಿಗಳು ವಾದಿಯ ಸ್ವಾಧೀನಾನುಭವಕ್ಕೆ ಈಗಲೂ ಸಹ ತೊಂದರೆ ನೀಡುತ್ತಿದ್ದೇವೆಂದರೆ ಸರಿ. ಸಾಕ್ಷಿ ಮುಂದುವರೆದು ವಾದಿಯು ನಾವು ಬಳಸುತ್ತಿದ್ದ ರಸ್ತೆಗೆ ತೊಂದರೆ ಮಾಡುತ್ತಿದ್ದರಿಂದ ನಾವು ಅವರಿಗೆ ತೊಂದರೆ ಮಾಡಿರುತ್ತೇವೆಂದು ನುಡಿಯುತ್ತಾರೆ. ಆ ರೀತಿ ರಸ್ತೆ ಇರುವ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಗೆ 01 ಫೋಟೋವನ್ನು ತೋರಿಸಿ ಸದರಿ ಫೋಟೋದಲ್ಲಿರುವ ಹೆಂಗಸು ನಿಮ್ಮ ಹೆಂಡತಿಯಾಗಿದ್ದು, ಅದರಲ್ಲಿ ಕಾಣಿಸುವ ನೀಲಿ ಬಣ್ಣದ ಅಂಗಿಯನ್ನು ಹಾಕಿಕೊಂಡಿರುವ ವ್ಯಕ್ತಿ ವಾದಿಯ ತಂದೆ ಭೈರಪ್ಪ ಆಗಿದ್ದು ಹಾಗು ಕೆಂಪು ಟೀ ಶರ್ಟ್ ಧರಿಸಿರುವ ವ್ಯಕ್ತಿ ವಾದಿಯಾಗಿರುತ್ತಾರೆ ಹಾಗು ಸದರಿ ಫೋಟೋವನ್ನು ನೀವು ವಾದಿಗೆ ತೊಂದರೆ ಕೊಟ್ಟಾಗ ತೆಗೆದ ಫೋಟೋ ಎಂದು ಸೂಚಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಫೋಟೋವನ್ನು ವಾದಿ ಪರವಾಗಿ **ನಿ.ಪಿ.-10** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಿ ಸದರಿ ಫೋಟೋವನ್ನು ಸಹ ಅದೇ ದಿನ ಗಲಾಟೆ ಸಮಯದಲ್ಲಿ ತೆಗೆಯಲಾಗಿದ್ದು ಎಂದು ಸೂಚಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಫೋಟೋವನ್ನು ವಾದಿಯ ಪರವಾಗಿ **ನಿ.ಪಿ.-11** ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿದಂತೆ ಧಾನ ಪತ್ರ ಹಾಗು ಅದರ ಆಧಾರದ ಮೇಲೆ ಆದ ಖಾತೆಯನ್ನು ಪ್ರಶ್ನಿಸಿ ಕಂದಾಯ ಅಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದು ಅದು ಈಗಾಗಲೇ ಮುಗಿದಿರುತ್ತದೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾವು ಆ ರೀತಿ ಯಾವುದೇ ಖಾತೆಯನ್ನು ಪ್ರಶ್ನಿಸಿರುವುದಿಲ್ಲವೆಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಆದ ಧಾನ

ಪತ್ರವನ್ನು ಸಿವಿಲ್ ನ್ಯಾಯಾಲಯದಲ್ಲಿ ಇದುವರೆಗೂ ಪ್ರಶ್ನಿಸಿರುವುದಿಲ್ಲ. ನಾನು ಪ್ರತಿವಾದ ಪತ್ರದಲ್ಲಿ ತಿಳಿಸಿದ ಅಸಲು ದಾವೆ ಸಂಖ್ಯೆ 94/2007 ರ ದಾವೆಯಲ್ಲಿ ವಾದಿ ಹಾಗು ಅವರ ಕುಟುಂಬದವರು ಪಕ್ಷಗಾರರಾಗಿರುವುದಿಲ್ಲವೆಂದರೆ ಸರಿ. ನಾನು ವಾದಿಯ ವಿರುದ್ಧ ಯಾವುದೇ ದಾವೆಯನ್ನು ಇದುವರೆಗೆ ಸಲ್ಲಿಸಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ಹೆಂಡತಿಯಾದ 5 ನೇ ಪ್ರತಿವಾದಿ ವಾದಿಯ ತಂದೆಯ ವಿರುದ್ಧ ಅಸಲು ದಾವೆ ಸಂಖ್ಯೆ 184/2016 ರಂತೆ ಹೆಚ್.ಡಿ. ಕೋಟೆಯ ಅಪರ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ದಾವೆ ದಿನಾಂಕಃ 18.11.2023 ವಜಾ ಆಗಿರುತ್ತದೆಂದರೆ ಸರಿ. ಅದನ್ನು ಪ್ರಶ್ನಿಸಿ ನನ್ನ ಹೆಂಡತಿಯಾದ 5 ನೇ ಪ್ರತಿವಾದಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಅದೇ ರೀತಿ ನಾನು ವಾದಿಯ ತಂದೆಯಾದ ಭೈರಪ್ಪ ಹಾಗು ಇತರರ ವಿರುದ್ಧ ಅಸಲು ದಾವೆ ಸಂಖ್ಯೆ 236/2016 ರಂತೆ ಹೆಚ್.ಡಿ. ಕೋಟೆಯ ಅಪರ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ದಾವೆ ದಿನಾಂಕಃ 30.05.2024 ವಜಾ ಆಗಿರುತ್ತದೆಂದರೆ ಸರಿ. ಅದನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕು-ಹಿತಾಸಕ್ತಿ ಇಲ್ಲದೇ ಇದ್ದಾಗ್ಯೂ ಸಹ ಹಿಂದೆ ವಾದಿಯ ಕುಟುಂಬದವರ ಮೇಲೆ ಸಿವಿಲ್ ವ್ಯಾಜ್ಯದ ಹಿನ್ನೆಲೆಯಲ್ಲಿದ್ದ ವೈಷಮ್ಯದ ಮೇರೆಗೆ ಅವರಿಗೆ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**